**ಕವಿತೆ**



## ಅರುಣ್ ಜೋಳದಕೂಡ್ಲಿಗಿ

ಕಲೆ: ಬಸವರಾಜ ಕಲೆಗಾರ



# ‘ನಾನು’ ಕಳೆದು ಹೋಗಿದ್ದೇನೆ

ಹೌದು ನಾನು ಕಳೆದುಹೋಗಿದ್ದೇನೆ
ನನ್ನನ್ನು ನಾನೇ ಹುಡುಕುಡುಕಿ
ಹುಚ್ಚನಾಗಿದ್ದೇನೆ...
ಆಧಾರ್ ಕಾರ್ಡಿನೊಳಗಿನ
ನನ್ನನ್ನು ಕಿತ್ತು ನಾಯಿನರಿಗಳಿಗೆ ಎಸೆದಿರಬಹುದೇ?
ಓಟರ್ ಐಡಿಯೊಳಗೆ
ಉಸಿರುಗಟ್ಟಿಸಿ ಕೊಂದಿರಬಹುದೇ?
ಗುರುತಿನ ಚೀಟಿಗಳಲ್ಲೆಲ್ಲಾ ಇಣುಕಿದ
ಮುಖಕ್ಕೆ ಆಸಿಡ್ ಎರಚಿರಬಹುದೇ?
ಗೂಗಲ್ಲಿನಲ್ಲಿ ನನ್ನ ಹೆಸರ ಟೈಪಿಸಿದರೆ
ತೆರೆದುಕೊಳ್ಳುವ ನೇಣಿಗೆ ತಲೆಕೊಟ್ಟು
ನೇತಾಡುವ ದೇಹಗಳ ಹಿಂದೆ
ಯಾವ ಅಗೋಚರ ಅಲ್ಗಾರಿದಮ್ಮಿನ
ಹುನ್ನಾರವಿರಬಹುದು?

ಅವ್ವಅಪ್ಪ ಅಕ್ಕತಂಗಿ ಅಣ್ಣತಮ್ಮಂದಿರು
ಸ್ನೇಹಿತರು ವೈರಿಗಳು ಪ್ರೇಯಸಿ ಹೆಂಡತಿ ಮಕ್ಕಳು
ಎಲ್ಲಾ ಪರಿಚಿತ ಅಪರಿಚಿತರ
ಹೃದಯಗಳಲ್ಲೂ...
ಕೊನೆಗೆ ಮನೆಯ ನಾಯಿ ಬೆಕ್ಕು
ಹಲ್ಲಿ ನೊಣ ಜಿರಲೆ ಜಂಡಿಗೆ ಸೊಳ್ಳೆ ಹುಳ ಹುಪ್ಪಡಿ
ಇರುವೆ ಗೊದ್ದ... ಕಟ್ಟಕಡೆಯದಾಗಿ
ಮೊಸರಿನ ಕೋಟ್ಯಂತರ ಸೂಕ್ಷ್ಮಾಣು
ಜೀವಿಗಳ ಕಣ್ಣಲ್ಲೂ ನನ್ನನ್ನು ಹುಡುಕಿದ್ದೇನೆ
ಅದಲ್ಲವೇ ಅಲ್ಲ ನಾನು...

ವಾಟ್ಸಪ್ ಸ್ಟೇಟಸ್ಸುಗಳಲ್ಲಿ ಅವಿತುಕೊಂಡು
ನನ್ನ ನೋಡುವ ಎಲ್ಲರ
ಕಣ್ಣುಗಳಲ್ಲೂ ಗಮನಿಸಿದ್ದೇನೆ...
ಡಿಪಿಯಲ್ಲಿ ಚಂದ್ರನ ಕೂರಿಸಿ
ಬೆಳದಿಂಗಳಲ್ಲೂ ತಡಕಾಡಿದ್ದೇನೆ...
ಸೌರವ್ಯೂಹದ ರೂಲ್ಸ್ ಬ್ರೇಕ್ ಮಾಡಿ
ಸೂರ್ಯನನ್ನು ಫೇಸ್‌ಬುಕ್‌ಇನ್‌ಸ್ಟಾದ
ಪ್ರೊಫೈಲ್ ಪಿಕ್ಚರಿಗೆ ಅಪ್ಲೋಡ್ ಮಾಡಿ
ಸೋಷಿಯಲ್ ಮೀಡಿಯಾದಲ್ಲೆಲ್ಲಾ
ಕಣ್ಣಾಡಿಸಿದ್ದೇನೆ..
ರೀಲ್ಸ್‌ಗಳ ಓಣಿ ಓಣಿಗಳಲ್ಲೆಲ್ಲಾ
ಅಡುಗೆ ಕೋಣೆಗಳಲ್ಲೆಲ್ಲಾ ಪರಿಶೀಲಿಸಿದ್ದೇನೆ
ಎಲ್ಲೆಂದರಲ್ಲಿ ನಾನು ಕಾಣಲೇ ಇಲ್ಲ...

ಒಬ್ಬಂಟಿಯಾಗಿ ನನ್ನನ್ನೇ ಹುಡುಕುತ್ತಾ
ಗುಡ್ಡ ಬೆಟ್ಟ ಕಾಡು ಬಯಲು ಹಳ್ಳಿ
ಮಹಾನಗರದ ಹೈರೈಸ್ ಹೌಸಸ್‌ಗಳಲ್ಲೆಲ್ಲಾ
ಅಂಡಲೆಯುತ್ತಿರುವಾಗ
ನನ್ನದೇ ಮುಖಮುದ್ರೆಯ ಜನರು
ಥೇಟ್ ನನ್ನ ಹಾಗೆಯೇ ದಿಕ್ಕುತಪ್ಪಿ
ಯಾರನ್ನೋ ಕಾಣಲೆತ್ನಿಸುತ್ತಿದ್ದಾರೆ..
‘ನನ್ನನ್ನೇ’ ಇರಬಹುದೆಂದು
ಬಚ್ಚಿಟ್ಟುಕೊಂಡು ಮರೆಯಲ್ಲಿದ್ದು ಇಣುಕಿದರೆ
ಕ್ಷಣಾರ್ಧದಲ್ಲಿ ಮಾಯವಾಗಿದ್ದಾರೆ...
ಬಹುಶಃ ಅವರೆಲ್ಲರಲ್ಲೂ ಉಳಿದವರೆಲ್ಲಾ
ನನ್ನನ್ನೇ ಹುಡುಕುತ್ತಿರಬಹುದೆಂಬ
ಆಂತಂಕದಲ್ಲಿ ನನ್ನ ಹಾಗೆಯೇ
ಅಡಗಿ ಕೂತಿರಬಹುದೇ?
ಪ್ರಜಾಪ್ರಭುತ್ವದಲ್ಲಿ ಗುಟುರುತ್ತಿರುವ
ಸರ್ವಾಧಿಕಾರಿಯ ಭಯದಲ್ಲಿ
‘ನಾನು’ ಕಳೆದು ಹೋಗಿದ್ದೇನೆಂದು
ನಿಮ್ಮೆದುರು ಸುಳ್ಳು ಹೇಳುತ್ತಿರಬಹುದೇ?

